ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು

ಸಿ.ಸಿ. ನಂ. **19/2018**

ಸಿ.ಡಬ್ಲೂ**-4** ಪಿ.ಡಬ್ಲೂ **-3**

ದಿಃ **23.11.2023** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ಮಲ್ಲಮ್ಮ |
| ಗಂಡ/ತಂದೆಯ ಹೆಸರು | ಚಿಕ್ಕೇಗೌಡ |
| ವಯಸ್ಸು | ಸುಮಾರು 60 ವರ್ಷ |
| ಕೆಲಸ | ಗೃಹಿಣಿ |
| ವಾಸಸ್ಥಳ | ಮೈಲಾಂಬೂರು ಗ್ರಾಮ |

(1 ರಿಂದ 5ನೇ ಆರೋಪಿತರು ಗೈರುಹಾಜರಿದ್ದು, ಅವರ ಗುರುತನ್ನು ತಕರಾರು ಮಾಡುವುದಿಲ್ಲ ಎಂಬ ಷರತ್ತಿಗೆ ಒಳಪಟ್ಟಂತೆ ಸಾಕ್ಷ್ಯ ತೆಗೆದುಕೊಳ್ಳಲಾಯಿತು).

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ-1 ನನ್ನ ಮಗಳು. ಚಾಸಾ-2 ನನ್ನ ಅಳಿಯ. ಚಾಸಾ-3 ನನ್ನ ಬೀಗತಿ. ಚಾಸಾ-5 ನನ್ನ ಮೊಮ್ಮಗ. ಚಾಸಾ-6 ರಿಂದ 9 ರವರು ನಮ್ಮ ಊರಿನವರು. ಆರೋಪಿತರು ನಮ್ಮ ಮಗಳ ಮನೆಯ ಬಲಗಡೆಯ ಪಕ್ಕದ ಮನೆಯವರು. ಚಾಸಾ-2 ಹಾಗೂ ನಮ್ಮ ಊರು ಎರಡೂ ಒಂದೇ.

ಈಗ್ಗೆ 6 ವರ್ಷಗಳ ಹಿಂದೆ ಬೆಳಿಗ್ಗೆ 8.00 ಗಂಟೆ ಸಮಯದಲ್ಲಿ ನಾನು, ಚಾಸಾ-1 ರಿಂದ 3 ಮತ್ತು 5 ರವರು ನನ್ನ ಮಗಳ ಮನೆಯ ಮುಂದೆ ನಿಂತಿದ್ದಾಗ, ಚಾಸಾ-2 ರವರು ಹಾಗೂ ಆರೋಪಿತರು ಜಗಳವಾಡುತ್ತಿದ್ದರು. ಆಗ ಆರೋಪಿತರು ಚಾಸಾ-2 ರವರನ್ನು ಕೆಡವಿ ಹಲ್ಲೆ ಮಾಡುತ್ತಿದ್ದರು. ನಾನು, ಚಾಸಾ-1 ಮತ್ತು 3 ರವರು ಬಿಡಿಸಲು ಹೋದಾಗ, 2ನೇ ಆರೋಪಿ ಚಾಸಾ-3 ರವರಿಗೆ ರಟ್ಟೆ, ಬೆನ್ನು ಮತ್ತು ಹೊಟ್ಟೆಗೆ

ಹೊಡೆದು ನೋವುಂಟುಪಡಿಸಿದನು. 1 ರಿಂದ 4ನೇ ಆರೋಪಿತರು ಚಾಸಾ-2 ರವರನ್ನು ಕೆಡವಿ ಹೊಟ್ಟೆಗೆ, ಬೆನ್ನಿಗೆ ಹಾಗೂ ಬಾಯಿಗೆ ಹೊಡೆದಿರುತ್ತಾರೆ. ಬಿಡಿಸಲು ಹೋದ ನನಗೆ 1ನೇ ಆರೋಪಿ ದೊಣ್ಣೆಯಿಂದ ನನ್ನ ಎದೆಗೆ ಎದೆಗೆ, ಎಡ ತೊಡೆ, ಹಾಗೂ ಎಡ ಹೆಬ್ಬರಳಿಗೆ ಹಲ್ಲೆ ಮಾಡಿರುತ್ತಾನೆ. ಚಾಸಾ-2 ರವರು ನನ್ನನ್ನು ಹಾಗೂ ಚಾಸಾ-3 ರವರನ್ನು ಹುಣಸೂರು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿರುತ್ತಾರೆ. ಆರೋಪಿತರು ಮನೆಯ ಜಾಗದ ಸಂಬಂಧ ಗಲಾಟೆ ಮಾಡಿರುತ್ತಾರೆ. ನ್ಯಾಯಾಲಯದ ಮುಂದಿರುವ ಮು.ಮಾ-1 ಮತ್ತು 2 ರಿಂದಲೇ ಆರೋಪಿತರು ನಮಗೆ ಹಲ್ಲೆ ಮಾಡಿರುತ್ತಾರೆ. ಆರೋಪಿತರು ಮುಂದೇನು ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷಿಯಾಗಿರುವುದರಿಂದ ಸ. ಸ. ಅ ರವರ ಪಾಟೀಸವಾಲಿಗಾಗಿ ಅನುಮತಿಯನ್ನು ಕೋರಿದ್ದು, ಆಲಿಸಿ ಅನುಮತಿಸಲಾಯಿತು.)

ಪಾಟೀಸವಾಲು ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ದಿಃ08.11.2017 ರಂದು ಬೆಳಿಗ್ಗೆ 8.00 ಗಂಟೆ ಸಮಯದಲ್ಲಿ ನೀವು, ಚಾಸಾ-1 ರವರ ಮನೆಯ ಬಳಿ ಹೋಗಿದ್ದಾಗ, ನೀವು, ಚಾಸಾ-1 ರಿಂದ 3 ಮತ್ತು 5 ರವರು ಮಾತನಾಡುತ್ತಿದ್ದಾಗ, ಆರೋಪಿತರು ಬಂದು ಬೊಳಿ ಮಕ್ಕಳಾ, ಸೂಳೆ ಮಕ್ಕಳಾ ಎಂದು ಅವಾಚ್ಯವಾಗಿ ಬೈದು, ಮನೆ ಇನ್ನು ಬಿಟ್ಟು ಕೊಟ್ಟಿಲ್ಲ ಎಂದು ನಿಂದಿಸಿದರು ಎಂದರೆ ಸರಿ. ಆಗ ಚಾಸಾ-2 ರವರು ಆರೋಪಿತರನ್ನು ಯಾಕೆ ಬಯ್ಯುತ್ತಿದ್ದೀರಾ ಎಂದು ಕೇಳಿದ್ದು, ಆರೋಪಿತರು ಬೊಳಿ ಮಗನೆ, ಸೂಳೆ ಮಗನೆ ಎಂದು ಬೈದು, ಚಾಸಾ-2 ರವರನ್ನು ಕೆಡವಿಕೊಂಡು ಹಲ್ಲೆ ಮಾಡಿರುತ್ತಾರೆಂದರೆ ಸರಿ. ಚಾಸಾ-1 ರವರು ಬಿಡಿಸಲು ಮುಂದಾದಾಗ 5ನೇ ಆರೋಪಿ ಮುಂದೆಲೆ ಹಿಡಿದು ಎಳೆದು, ಕೆಡವಿ ಹಲ್ಲೆ ಮಾಡಿರುತ್ತಾರೆಂದರೆ ಸರಿ. ಚಾಸಾ-5 ರವರು ಬಿಡಿಸಲು ಮುಂದಾದಾಗ 2ನೇ ಆರೋಪಿ

ದೊಣ್ಣೆಯಿಂದ ಬಲಕ್ಕೆ ಬೆರಳಿಗೆ ಹಲ್ಲೆ ಮಾಡಿರುತ್ತಾರೆಂದರೆ ಸರಿ. ಆರೋಪಿತರೆಲ್ಲರೂ ಸೇರಿ ಕೊಲೆ ಮಾಡುವುದಾಗಿ ನಿಮ್ಮಗಳಿಗೆ ಬೆದರಿಕೆ ಹಾಕಿರುತ್ತಾರೆಂದರೆ ಸರಿ. ಆಗ ಚಾಸಾ-6 ಮತ್ತು 7 ರವರು ಬಂದು ಜಗಳ ಬಿಡಿಸಿರುತ್ತಾರೆಂದರೆ ಸರಿ. ಈಗ ಓದಿ ಹೇಳಿದಂತೆ ಪೊಲೀಸರ ಸಮಕ್ಷಮ ಹೇಳಿಕೆ ನೀಡಿದ್ದೇನೆಂದರೆ ಸರಿ.

<u>ಪಾಟೀ ಸವಾಲು ಆರೋಪಿತರ ಪರ ವಕೀಲರು ಶ್ರೀ ಎಸ್.ಪಿ. ವಕೀಲರಿಂದಃ</u>

ಚಾಸಾ-1 ಮತ್ತು 2 ರವರುಗಳು ವ್ಯವಸಾಯ ಮಾಡುತ್ತಾರೆ ಎಂದರೆ ಸರಿ. 1ನೇ ಆರೋಪಿ ಮನೆಯವರು ಸಹ ವ್ಯವಸಾಯ ಮಾಡುತ್ತಾರೆಂದರೆ ಸರಿ. ಚಾಸಾ-1 ರಿಂದ 3 ಮತ್ತು 5 ರವರು ವ್ಯವಸಾಯ ಕೆಲಸಕ್ಕೆ ಜಮೀನಿಗೆ ಬೆಳಿಗ್ಗೆ ಹೋದರೆ ಸಂಜೆ ಬರುವುದು ಎಂದರೆ ಸರಿ. ಆರೋಪಿತರು ವ್ಯವಸಾಯ ಕೆಲಸಕ್ಕೆ ಜಮೀನಿಗೆ ಬೆಳಿಗ್ಗೆ 6.00 ಗಂಟೆಗೆ ಹೋದರೆ ಸಂಜೆ ಬರುವುದು ಎಂದರೆ ಸರಿ. ಸಾಕ್ಷಿ ಮುಂದುವರೆದು ಹಳ್ಳಿ ಜನರಲ್ಲಿ ಅಷ್ಟೆ ಇದೆ ಎಂದು ಹೇಳುತ್ತಾರೆ. ಚಾಸಾ-2 ರವರ ಮನೆಯ ಸ್ವಲ್ಪ ದೂರದಲ್ಲಿ ಹೋಟೆಲ್ ಮತ್ತು ದೇವಸ್ಥಾನ ಇದೆ ಎಂದರೆ ಸರಿ. ಸದರಿ ಹೋಟೆಲ್ ಮತ್ತು ದೇವಸ್ಥಾನ ಬಳಿ ಸುಮಾರು 30-40 ಜನ ಬೆಳಿಗ್ಗೆ ಸಮಯದಲ್ಲಿ ಸೇರುತ್ತಾರೆಂದರೆ ಸರಿ. ಚಾಸಾ-2 ರವರ ಮನೆಯ ಹೊರಭಾಗದಲ್ಲಿ ನಿಂತರೆ ಹೋಟೆಲ್ ಗೆ ಬರುವ ಜನ ಕಾಣಿಸುತ್ತಾರೆಂದರೆ ಸರಿ.

ಗಲಾಟೆಯಾಯಿತು ಎಂದು ಹೇಳುವ ಸಮಯದಲ್ಲಿ ನೀವು ಎಲ್ಲಿ ಇದ್ದೀರಿ ಎಂದರೆ ಸಾಕ್ಷಿ ಚಾಸಾ-1, 2 ಮತ್ತು 5 ಮನೆಯ ಮುಂದೆ ಜಗಲಿ ಮೇಲೆ ಕುಳಿತಿದ್ದು, ನಾನು ಮತ್ತು ಚಾಸಾ-3 ಮನೆಯ ಒಳಗೆ ಇದ್ದೇವು ಎಂದು ಹೇಳುತ್ತಾರೆ. 1 ರಿಂದ 4ನೇ ಆರೋಪಿತರು ಚಾಸಾ-2 ರವರಿಗೆ ಯಾರ್ಯಾರು, ಎಲ್ಲೆಲ್ಲಿಗೆ ಹೊಡೆದರು ಎಂದು ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಗೊತ್ತು ಎಂದು ಹೇಳುತ್ತಾರೆ. ಚಾಸಾ-2 ರವರಿಗೆ 1ನೇ ಆರೋಪಿ ಕೈಗಳಿಂದ ಹೊಡೆದನೋ, ಕಾಲಿನಿಂದ ಒದ್ದನೋ ಎಂದರೆ ಸಾಕ್ಷಿ ಕಾಲಿನಿಂದ ತುಳಿದು, ಕೈಯಿಂದ ಹೊಡೆದನು ಎಂದು ಹೇಳುತ್ತಾರೆ. 2ನೇ ಆರೋಪಿ ಚಾಸಾ-2 ರವರಿಗೆ

ಕೈಗಳಿಂದ ಹೊಡೆದಿದ್ದನಾ ಎಂದರೆ ಸಾಕ್ಷಿ ಕೈಗಳಿಂದ ಮತ್ತು ಕಾಲಿನಿಂದ ಹಲ್ಲೆ ಮಾಡಿರುತ್ತಾನೆ ಎಂದು ಹೇಳುತ್ತಾರೆ. ಚಾಸಾ-2 ರವರಿಗೆ 1 ಮತ್ತು 2 ನೇ ಆರೋಪಿತರು ಹಲ್ಲೆ ಮಾಡಬೇಕಾದರೆ ಅವರ ಕೈಗಳಲ್ಲಿ ಆಯುಧಗಳು ಇರಲಿಲ್ಲ ಎಂದರೆ ಸರಿ. ಆರೋಪಿತರು ನಿಮಗೆ ಹಾಗೂ ಚಾಸಾ-3 ರವರಿಗೆ ದೊಣ್ಣೆಗಳಿಂದ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಗಲಾಟೆಯಾಗಬೇಕಾದರೆ ಹೊಟೇಲ್ ಬಳಿ ಇದ್ದ ಗ್ರಾಹಕರು, ದೇವಸ್ಥಾನದ ಬಳಿ ಇದ್ದ ಭಕ್ತಾದಿಗಳು ಘಟನಾ ಸ್ಥಳದ ಬಳಿ ಬಂದಿರಲಿಲ್ಲ ಎಂದರೆ ಸರಿ. ನಿಮ್ಮ ಹಾಗೂ ಆರೋಪಿತರ ನಡುವೆ ಯಾವುದೇ ಗಲಾಟೆಯಾಗಿರಲಿಲ್ಲ ಹಾಗಾಗಿ ಸಾರ್ವಜನಿಕರು ಯಾರೂ ಘಟನೆ ನಡೆಯಿತು ಎಂದು ಹೇಳುವ ಸ್ಥಳಕ್ಕೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ನೀವು ಆಸ್ಪತ್ರೆಗೆ ಬಂದಾಗ ಎಷ್ಟು ಸಮಯ ಆಗಿತ್ತು ಎಂದರೆ ಸಾಕ್ಷಿ 8.30 ಎಂದು ಹೇಳುತ್ತಾರೆ. ನೀವು ವೈದ್ಯರ ಬಳಿ ಗಲಾಟೆಯ ಸಂಬಂಧ ಹೇಳಿಕೆ ನೀಡಿದ್ದೀರಾ ಎಂದರೆ ಸಾಕ್ಷಿ ಹೇಳಿದ್ದೇನೆ ಎಂದು ಹೇಳುತ್ತಾರೆ. ಯಾವತ್ತು ಹೇಳಿಕೆ ನೀಡಿದ್ದೀರಾ ಎಂದರೆ ಸಾಕ್ಷಿ ಅದೇ ದಿನವೋ, ಮೂರು ದಿನದ ನಂತರವೋ ಹೇಳಿರಬೇಕು ಎಂದು ಹೇಳುತ್ತಾರೆ. ನೀವು ವೈದ್ಯರ ಬಳಿ ಘಟನೆಯ ಸಂಬಂಧ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

ಪೊಲೀಸರು ನಿಮ್ಮ ಹೇಳಿಕೆಯನ್ನು ಯಾವಾಗ, ಏಲ್ಲಿ ಮಾಡಿರುತ್ತಾರೆಂದರೆ ಸಾಕ್ಷಿ ಅದೆಲ್ಲಾ ಗೊತ್ತಿಲ್ಲ, ಚಾಸಾ-1 ರವರಿಗೆ ಗೊತ್ತು ಎಂದು ಹೇಳುತ್ತಾರೆ. ನೀವು ಆಸ್ಪತ್ರೆಯಲ್ಲಿದ್ದಾಗ ಪೊಲೀಸ್ ರಿಗೆ ಹೇಳಿಕೆ ನೀಡಿಲ್ಲ ಎಂದರೆ ಸಾಕ್ಷಿ ಚಾಸಾ-1 ನೀಡಿರಬೇಕು, ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಚಾಸಾ-1 ಹಾಗೂ ಆರೋಪಿತರಿಗೂ ತುಂಬಾ ವರ್ಷಗಳಿಂದ ಮನೆಯ ಸಂಬಂಧ ತಕರಾರು ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 6 ವರ್ಷಗಳಿಂದ ಈಚೆಗೆ ತಕರಾರು ಎಂದು ಹೇಳುತ್ತಾರೆ. ಚಾಸಾ-1 ರವರಿಗೆ ಅನುಕೂಲವಾಗಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಚಾಸಾ-1, 2 ರವರ ಮೇಲೆ ಆರೋಪಿತರು ನೀವು ಹೇಳಿದಂತೆ ಯಾವುದೇ ಗಲಾಟೆ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ-2 ರವರನ್ನು ಆರೋಪಿತರು ಹಿಡಿದುಕೊಂಡು ಹೊಡೆದು, ತುಳಿದರು ಎಂದು ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮಗೂ ಹಾಗೂ ಚಾಸಾ-3 ರವರಿಗೂ ಆರೋಪಿತರು ಮು.ಮಾ-1 ಮತ್ತು2 ರಿಂದ ಹಲ್ಲೆ ಮಾಡಿರುತ್ತಾರೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ವೈದ್ಯರ ಬಳಿ ಹಾಗೂ ಪೊಲೀಸರ ಸಮಕ್ಷಮ ಯಾವುದೇ ಹೇಳಿಕೆ ನೀಡಿಲ್ಲದೇ ಇದ್ದರೂ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು.